ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,
ಪೊನ್ನಂಪೇಟೆ

**ಸಿ.ಸಿ. ನಂ.1558/2024 DW-1**

ದಿನಾಂಕಃ **22.09.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಸ್ವಾತಿ |
| ಗಂಡನ ಹೆಸರು | : | ಶೇಶ ಶಯನ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಗೃಹಣಿ |
| ವಾಸ ಸ್ಥಳ | : | ಮಾಯಮುಡಿ |

ಮುಖ್ಯ ವಿಚಾರಣೆ ಶ್ರೀ. **S.V.S** ವಕೀಲರಿಂದಃ-

2020 ನೇ ಇಸವಿಯಲ್ಲಿ ನನ್ನ ಗಂಡನ ತಾಯಿ ತೀರಿಕೊಂಡಿದ್ದು ಸಾತ್ವಿಕ್ ಫೈನಾನ್ಸ ನಿಂದ ಹಣ ಖರ್ಚಿಗೆ ನನ್ನ ಗಂಡ 1 ಲಕ್ಷ ಸಾಲ ಪಡೆದಿದ್ದು, ಆ ಸಾಲದ ಭದ್ರತೆಗೆ ನನ್ನ ಸಹಿ ಹಾಕಿದ ಖಾಲಿ ಚೆಕ್ ಅನ್ನು ಫೈನಾನ್ಸ ಅವರಿಗೆ ಕೊಟ್ಟಿರುತ್ತಾರೆ. ಅಸಲು ಮತ್ತು ಬಡ್ಡಿ ತೀರಿಸುತ್ತಿದ್ದು ರಶೀದಿ ಕೊಡುತ್ತಿರಲಿಲ್ಲ. ಈ ಕಾರಣಕ್ಕೆ ನನ್ನ ಗಂಡ ಮತ್ತು ಫೈನಾನ್ಸ ರವರ ಜೊತೆ ಜಗಳವಾಗಿರುತ್ತದೆ. ಎದುರುದಾರರ ಹೆಂಡತಿ ಈ ಫೈನಾನ್ಸ ನ ವ್ಯವಸ್ಥಾಪಕರಾಗಿದ್ದರು. ಆ ಸಾಲಕ್ಕೆ ಕೊಟ್ಟಂತಹ ನಿ.ಪಿ.1 ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದೂರು ಕೊಟ್ಟಿರುತ್ತಾರೆ. ನನ್ನ ಚೆಕ್ಕುಗಳ ಜೊತೆ ನನ್ನ ಗಂಡ ಮತ್ತು ನನ್ನ ತಮ್ಮನ ಸಹಿ ಹಾಕಿದ ಖಾಲಿ ಚೆಕ್ಕುಗಳನ್ನು ಪಡೆದಿರುತ್ತಾರೆ. ಈ ರೀತಿ ದುರುಪಯೋಗ ಮಾಡಿಕೊಂಡಿರುವುದಕ್ಕೆ ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ. ಪೊಲೀಸ್ ದೂರಿನಂತೆ ಎದುರುದಾರರ ಹೆಂಡತಿಯನ್ನು ವಿಚಾರಣೆ ಮಾಡಿರುತ್ತಾರೆ. ಎದುರುದಾರರ ಹೆಂಡತಿಯ ವಿರುದ್ಧ ಕೊಟ್ಟ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಹಣ ಪಾವತಿ ಮಾಡುವಾಗ ರಶೀದಿಯನ್ನು ಕೊಡದೆ ಇದ್ದ ಕಾರಣಕ್ಕೆ ಕೇಳಿದಾಗ ಜಗಳವಾದ ವಿಡಿಯೋ ಇರುತ್ತದೆ. ದೂರುದಾರರ ಜೊತೆ ಆದಂತಹ ಸಂಭಾಷಣೆ ಕೂಡ ಇರುತ್ತದೆ.

**CC. No.1558/2024** **DW – 1**

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**sd/-**
**ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.**